ಈಗ ಸದನವನ್ನು 2.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನ ಮಧ್ಯಾಹ್ನ 1 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 2.30 ಗಂಟೆಗೆ ಸೇರಲು ನಿಶ್ಚಯಿಸಿತು).

(ಸದನವು ಮಧ್ಯಾಹ್ನ 3.00 ಗಂಟೆಗೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷರ ಪೀಠದಲ್ಲಿ ಉಪಾಧ್ಯಕ್ಷ ಶ್ರೀ ಮನೋಹರ್ ಹೆಚ್. ತಹಶೀಲ್ದಾರ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿಸ್ದರು).

2. ಪ್ರಕಟಣೆ

ಮಾನ್ಯ ಉಪಾಧ್ಯಕ್ಷರು:- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 19ನೇ ಮಾರ್ಚ್ 2003 ರಂದು ಹಾಗೂ 20-3-2003 ರಂದು ಈ ಕೆಳಕಂಡ ವಿಧೇಯಕಗಳನ್ನು ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1) "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2003"

2) "ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ವಿಧೇಯಕ, 2002"

3) "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2002."

4) "ಕರ್ನಾಟಕ ಗೃಹ ರಕ್ಷಕದಳ (ತಿದ್ದುಪಡಿ) ವಿಧೇಯಕ, 2003"

3. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಎಥೆನಾಲ್ ಉತ್ಪಾದನೆ

192 (2257) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ 'ಎಥೆನಾಲ್' ಉತ್ಪಾದನೆ ಮಾಡಲು ಸಂಬಂಧಿಸಿದವರಿಂದ ಅನುಮತಿ ದೊರಕಿದೆಯೇ?

ಆ) ದೊರಕಿದ್ದಲ್ಲಿ, ಪೂರ್ವ ಸಿದ್ಧತಾ ಕ್ರಮಗಳನ್ನೇನಾದರೂ ಕೈಗೊಳ್ಳಲಾಗಿದೆಯೇ?

ಇ) ಕೈಗೊಳ್ಳಲಾಗಿದ್ದಲ್ಲಿ, ಅದರ ಬಗೆಗಿನ ಮಾಹಿತಿಗಳೇನು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು):

ಅ) ಕಾರ್ಖಾನೆಯಲ್ಲಿ ಈಗಾಗಲೇ ಒಂದು ಕಿಲೋ ಲೀಟರ್‌ನಷ್ಟು ಎಥೆನಾಲ್‌ನ್ನು ಆಸ್ಪತ್ರೆಯಲ್ಲಿ ಉಪಯೋಗಿಸಲು ಅನುಮತಿ ಪಡೆದು ತಯಾರಿಸಲಾಗುತ್ತಿದೆ. ಪೆಟ್ರೋಲ್ ಜೊತೆ ಮಿಶ್ರಣ ಮಾಡಲು ಅನುಮತಿ ಪಡೆದಿಲ್ಲ.

ಆ) ಅನುಮತಿ ಪಡೆದಿಲ್ಲದಿರುವ ಕಾರಣ, ಪೂರ್ವ ಸಿದ್ಧತಾ ಕ್ರಮಗಳನ್ನು ಕೈಗೊಳ್ಳಲಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಉಪಾಧ್ಯಕ್ಷರೆ, ಇಡೀ ವಿಶ್ವದಲ್ಲಿಯೇ ಸಕ್ಕರೆ ಉದ್ಯಮ ಸಂಕಷ್ಟದಲ್ಲಿರುವುದು ಸರ್ವವಿಧಿತವಾದುದು. ಇಂಥ ಸಮಯದಲ್ಲಿ ಎಥನಾಲ್ ತಯಾರಿಕೆ ಸಕ್ಕರೆ ಉದ್ಯಮಕ್ಕೆ ಹಾಗೂ ಕಬ್ಬು ಬೆಳೆಗಾರರಿಗೆ ವರಪ್ರಧಾನವಾಗಿ ಬಂದಿರತಕ್ಕದ್ದು. ಸಕ್ಕರೆ ಕಾರ್ಖಾನೆಯ ಆರ್ಥಿಕ ಶಕ್ತಿಯನ್ನು ಹೆಚ್ಚಿಸಲಿಕ್ಕೆ ಬಂದಿರತಕ್ಕಂಥ ಎಥನಾಲ್ ತಯಾರಿಕೆಯ ವಿಚಾರದಲ್ಲಿ ಹೇಳುವುದೇನೆಂದರೆ, ಈಗೇನು ಮಂಡ್ಯದಲ್ಲಿ ಮೈಸೂರು ಸಕ್ಕರೆ ಕಾರ್ಖಾನೆ ಇದೆ. ಅದು ಸರ್ಕಾರಿ ಸ್ವಾಮ್ಯದಲ್ಲಿರತಕ್ಕಂಥದ್ದಾಗಿದೆ. ಈ ಎಥನಾಲ್‌ನ್ನು ಕೇವಲ ಆಸ್ಪತ್ರೆಗಳಲ್ಲಿ ಮಾತ್ರ ಉಪಯೋಗಿಸುತ್ತಿರುವುದು ಎಂಬ ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಈ ಎಥನಾಲ್ ತಯಾರಿಕೆಯನ್ನು ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಸರ್ಕಾರ ತಯಾರು ಮಾಡುವುದಕ್ಕೆ ಏಕೆ ಯೋಚನೆಯನ್ನು ಮಾಡಬಾರದು? ಕೇಂದ್ರ ಸರ್ಕಾರ ಕೂಡ ಯಾವ ಯಾವ ರಾಜ್ಯಗಳಲ್ಲಿ ಕಬ್ಬು ಬೆಳೆಯಲಾಗುತ್ತಿದೆಯೋ ಅಲ್ಲೆಲ್ಲಾ ಎಥ್‌ನಾಲ್‌ನ್ನು ತಯಾರಿಕೆ ಮಾಡಲು ಪ್ರೋತ್ಸಾಹ ಕೊಡುತ್ತಿದೆ. ಮಹಾರಾಷ್ಟ್ರದಲ್ಲೂ ಕೂಡ ಎಥ್‌ನಾಲ್ ತಯಾರಿಕೆ ಪ್ರಾರಂಭವಾಗಿದೆ. ಆ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಕೂಡ ಎಥ್‌ನಾಲ್ ತಯಾರಿಸುವ ಬಗ್ಗೆ ಸರ್ಕಾರ ಆಲೋಚನೆಯನ್ನೇನಾದರೂ ಸರ್ಕಾರ ಮಾಡಿದೆಯೇ? ಆ ರೀತಿ ಯೋಚನೆ ಮಾಡಿದ್ದರೆ ಯಾವ ಯಾವ ಸ್ಥಳಗಳಲ್ಲಿ ಎಥ್‌ನಾಲ್ ತಯಾರಿಕೆ ಮಾಡಲು ಸರ್ಕಾರ ಅಭಿಪ್ರಾಯ ಪಟ್ಟಿದೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆಯು ಐದು ಸಾವಿರ ಟಿ.ಪಿ.ಹೆಚ್. ನಷ್ಟು ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದ್ದು ಇದರೊಂದಿಗೆ 35 ಕಿಲೋ ಲೀಟರ್ ಸಾಮರ್ಥ್ಯದ ಡಿಸ್ಟಿಲರಿಯನ್ನು ಹೊಂದಿರುತ್ತದೆ. ಹಾಲಿ ಕಾರ್ಖಾನೆಯಲ್ಲಿ ಪ್ರತಿ ದಿನ ಒಂದು ಕಿಲೋ ಲೀಟರ್‌ನಷ್ಟು ಎಥನಾಲ್ ಉತ್ಪಾದನೆ ಮಾಡುತ್ತಿದ್ದು ಇದಕ್ಕೆ ಸಂಬಂಧಪಟ್ಟಂತೆ ಅನುಮತಿಯನ್ನು ಪಡೆಯಲಾಗಿದೆ. ಇದನ್ನು ಸಧ್ಯಕ್ಕೆ ಆಸ್ಪತ್ರೆಗಳಲ್ಲಿ ಉಪಯೋಗಿಸುವುದಕ್ಕೆ ಮಾತ್ರ ಸರಬರಾಜು ಮಾಡಲಾಗುತ್ತಿದೆ. ಪೆಟ್ರೋಲ್ ಜೊತೆ ಮಿಶ್ರಣ ಮಾಡಲು ಎಥನಾಲ್ ತಯಾರಿಕೆಗೆ ಇನ್ನೂ ಕ್ರಮ ಕೈಗೊಂಡಿರುವುದಿಲ್ಲ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾರ್ಖಾನೆಯು ಆರ್ಥಿಕ ಸಾಧ್ಯತೆಯನ್ನು ಅಧ್ಯಯನ ಮಾಡಲು ಪರಿಣಿತರಿಗೆ ಒಪ್ಪಿಸಲು ಪರಿಶೀಲಿಸುತ್ತಿದೆ. ದಿನಾಂಕ 23-10-2002 ರಂದು ಯೂನಿಯನ್ ಮಿನಿಸ್ಟರ್‌ರವರು ಎಲ್ಲಾ ರಾಜ್ಯಗಳ ಮಂತ್ರಿಗಳ ಕಾನ್‌ಫರೆನ್ಸ್‌ನ್ನು ನಡೆಸಿದರು. ಆಗ ಕೋಜನರೇಶನ್, ಎಥನಾಲ್ ಹಾಗೂ ಡಿಸ್ಟಿಲರಿಗಳನ್ನು ಸಕ್ಕರೆ ಕಾರ್ಖಾನೆಗಳಲ್ಲಿ ತಯಾರಿಸಲು ಯಾವ ರೀತಿ ಅಳವಡಿಸಬೇಕು ಎಂಬ ಬಗ್ಗೆ ಡಿಸ್‌ಕಶನ್ ನಡೆಯಿತು. ಭಾರತ ದೇಶದಲ್ಲಿ ಸುಮಾರು 9 ಸಕ್ಕರೆ ಕಾರ್ಖಾನೆಗಳಲ್ಲಿ ಹೆಚ್ಚು ಸಕ್ಕರೆ ಪ್ರೊಡ್ಯೂಸ್ ಮಾಡತಕ್ಕಂಥವುಗಳು ಇವೆ. ಅದರಲ್ಲಿ ಕರ್ನಾಟಕ ರಾಜ್ಯವೂ ಕೂಡ ಒಂದಾಗಿದೆ. ಈ ಕಾರ್ಖಾನೆಗಳಲ್ಲಿ ಎಥನಾಲ್‌ನ್ನು ಪ್ರೊಡ್ಯೂಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡುವ ಸಲುವಾಗಿ ಅವರು ಪರಿಶೀಲನೆಯನ್ನು ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷದಷ್ಟು ಮೊಲ್ಯಾಸಸ್ ಎಕ್ಸ್‌ಪೋರ್ಟ್

ಮಾಡಲಾಗುತ್ತಿದೆ. ಭಾರತ ಸರ್ಕಾರ ಈಗೇನು ಗೈಡ್‌ಲೈನ್ಸ್‌ನ್ನು ಎಥನಾಲ್ ತಯಾರಿಕೆ ಬಗ್ಗೆ ಕೊಟ್ಟಿದ್ದಾರೆ ಆ ಪ್ರಕಾರ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದು ಪರಿಶೀಲನೆಯಲ್ಲಿದೆ ಎನ್ನುವ ವಿಚಾರವನ್ನು ಹೇಳಿದ್ದಾರೆ, ಅದು ಸ್ವಾಗತಾರ್ಹವಾದ ವಿಚಾರ. ಏನಾದರೂ ಕೂಡ ಕೇಂದ್ರ ಸರ್ಕಾರದ ಮೇಲೆ ಈ ಬಗ್ಗೆ ಒತ್ತಾಯ ಮಾಡಬೇಕು, ಅವರೂ ಕೂಡ ಪರ್ಮಿಶನ್ ಕೊಡುತ್ತೇವೆಂದು ಹೇಳಿದ್ದಾರೆ. ಆದಷ್ಟು ಶೀಘ್ರವಾಗಿ ಸಕ್ಕರೆ ಕಾರ್ಖಾನೆಗಳಲ್ಲಿ ಎಥನಾಲ್ ತಯಾರಿಕೆ ಮಾಡುವ ಘಟಕಗಳನ್ನು ಪ್ರಾರಂಭ ಮಾಡಿ ಈಗೇನು ಸಕ್ಕರೆ ಕಾರ್ಖಾನೆಗಳಿವೆ ಅವು ಆಷ್ಟೊ ಇಷ್ಟೋ ಸಕ್ಕರೆ ಉದ್ಯಮಕ್ಕೆ ಪೂರಕವಾಗುವಂಥ ದೃಷ್ಟಿಯಲ್ಲಿ ಇದನ್ನು ಪ್ರಾರಂಭ ಮಾಡಬೇಕು ಎಂದು ತಮ್ಮ ಮೂಲಕ ಮಂತ್ರಿಗಳನ್ನು ಕೇಳುತ್ತೇನೆ. ಇನ್ನು ಹಲವಾರು ಸಕ್ಕರೆ ಕಾರ್ಖಾನೆಗಳಲ್ಲಿ ಡಿಸ್ಟಿಲರಿ ಇಲ್ಲ. ಅಂಥ ಕಾರ್ಖಾನೆಗಳಿಗೂ ಸರ್ಕಾರ ಪ್ರೋತ್ಸಾಹ ಕೊಡುತ್ತದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು ಎಂದು ಕೋರುತ್ತೇನೆ.

ಶ್ರೀ ಎಂ. ಮಹದೇವು:- ಮಾನ್ಯ ಉಪಾಧ್ಯಕ್ಷರೆ, ಪೆಟ್ರೋಲ್‌ಗೆ ಶೇಕಡ 5 ರಷ್ಟು ಎಥನಾಲ್‌ನ್ನು ಮಿಕ್ಸ್ ಮಾಡಿಕೊಡಲಿಕ್ಕೆ ಈಗಾಗಲೇ ಒಂದು ತೀರ್ಮಾನಕ್ಕೆ ಬರಲಾಗಿದೆ. ಈ ತಿಂಗಳ 22 ರಂದು ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲೀಕರ ಮೀಟಿಂಗ್‌ನ್ನು ಕರೆಯಲಾಗಿದೆ. ಅಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಉಪಾಧ್ಯಕ್ಷರೆ, ಈ ಪ್ರಶ್ನೆ ಮೈಸೂರು ಸಕ್ಕರೆ ಕಾರ್ಖಾನೆಗೆ ಮಾತ್ರ ಸೀಮಿತವಾಗಿರುವುದರಿಂದ ನಾನು ಕೂಡ ಶೂನ್ಯ ವೇಳೆಯಲ್ಲಿ ಒಂದು ನೋಟೀಸ್ ಕೊಟ್ಟಿದ್ದೆ. ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಇದನ್ನು ನಡೆಸುವುದಕ್ಕೆ ನಮ್ಮ ಕೃಷ್ಣರಾಜ ಸಾಗರದಲ್ಲಿ ನೀರಿಲ್ಲವಾಗಿದೆ. ಆ ಕಾರ್ಖಾನೆಯನ್ನು ನಡೆಸುವುದು ಬಹಳ ದುಸ್ತರವಾಗಿರತಕ್ಕಂಥದ್ದು. ಸುಮಾರು 60 ಸಾವಿರ ಟನ್ ಕಬ್ಬು ಇನ್ನೂ ಹಾಗೆಯೇ ಉಳಿದಿದೆ. ರಸ್ತೆಯಲ್ಲಿ ಹಾಕಿಕೊಂಡು ರೈತರು ಬಹಳ ತೊಂದರೆಯನ್ನು ಪಡುತ್ತಿದ್ದಾರೆ. ಕಬ್ಬಿನ ಮೇಲೆ ಬಿಂದಿಗೆಯಲ್ಲಿ ನೀರನ್ನು ಹಾಕಿ ನೀರಿನ ಮಾಯ್‌ಶ್ಚರ್ ಕಾಪಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಏನೋ, ಇನ್ನೊಂದು ವಾರದಲ್ಲಿ ಆ ಫ್ಯಾಕ್ಟರಿ ನಿಂತು ಹೋಗಬಹುದು. ಈ ನಮ್ಮಲ್ಲಿ ಒಪ್ಪಿಗೆ ಪಡೆದುಕೊಂಡಿರುವ ಕಬ್ಬನ್ನು ಬೇರೆ ಎಲ್ಲಾದರೂ ಸಕ್ಕರೆ ಕಾರ್ಖಾನೆಯಲ್ಲಿ ಅರೆಯುವುದಕ್ಕೆ ಸಾಗಿಸಲು ಏನಾದರೂ ಏರ್ಪಾಡನ್ನು ಮಾಡುತ್ತಾರೆಯೇ? ಆ ದಿಸೆಯಲ್ಲಿ ಆ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಸಕರನ್ನು ಕರೆದು ಚರ್ಚಿಸಿ ಉಚಿತವಾದ ತೀರ್ಮಾನ ತೆಗೆದುಕೊಳ್ಳಬೇಕು. ಏಕೆಂದರೆ ಈ ಸಕ್ಕರೆಯ ಕಾರ್ಖಾನೆಯಲ್ಲಿ ಇಳುವರಿ ಕೂಡ ದಿನದಿಂದ ದಿನಕ್ಕೆ ಕಡಿಮೆಯಾಗಿ 6 ರಿಂದ 7ಕ್ಕೆ ಬಂದಿರುವುದರಿಂದ ರೈತನಿಗೆ ಹಾಗೂ ಕಾರ್ಖಾನೆಗೆ ನಷ್ಟವಾಗುತ್ತಿದೆ. ಈ ಒಂದು ಹಿನ್ನೆಲೆಯಲ್ಲಿ ತುರ್ತಾಗಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಆಗ್ರಹಪಡಿಸುತ್ತೇನೆ.

ಶ್ರೀ ಎಂ. ಮಹದೇವು:- ಮಾನ್ಯ ಉಪಾಧ್ಯಕ್ಷರೆ, ಸುಮಾರು 60 ಸಾವಿರ ಟನ್‌ನಷ್ಟು ಅಲ್ಲಿ ಕಬ್ಬು ಎಕ್ಸ್‌ಸ್ ಇದೆ. ಇದನ್ನು ಅಕ್ಕಪಕ್ಕದಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆಗಳಿಗೆ ಕಳುಹಿಸುವ ಕೆಲಸ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅಲ್ಲಿ ಅಕ್ಕಪಕ್ಕದಲ್ಲಿ ಯಾವ ಸಕ್ಕರೆ ಕಾರ್ಖಾನೆಗಳು ಇವೆ?

ಶ್ರೀ ಶ್ರೀ ಎಂ. ಮಹದೇವು:- ಬಣ್ಣಾರಿ ಷುಗರ್ ಫ್ಯಾಕ್ಟರಿ ಇದು ನಂಜನಗೂಡಿನಲ್ಲಿದೆ. ತಮಿಳುನಾಡಿನ ಬಾರ್ಡರ್‌ನಲ್ಲಿ ಒಂದು ಬಣ್ಣಾರಿ ಷುಗರ್, ಚಾಮುಂಡೇಶ್ವರಿ ಇದೆ. ಒಟ್ಟಿನಲ್ಲಿ 60 ಸಾವಿರ ಟನ್ ಕಬ್ಬು ಎಕ್ಸ್‌ಸ್ ಏನಿದೆ ಅದನ್ನು ಅಲ್ಲೆಲ್ಲಾ ವಿತರಣೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಇದಕ್ಕೋಸ್ಕರ ಒಂದು ಮೀಟಿಂಗ್‌ನ್ನು ಕರೆದು ಎಷ್ಟು ಕಬ್ಬನ್ನು ಅರೆಯುವುದಕ್ಕೆ ಸಾಧ್ಯವಾಗುತ್ತದೆ, ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೆ, ನಾವು ಮಾನ್ಯ ಮುಖ್ಯಮಂತ್ರಿಗಳನ್ನು ನಂಬಬೇಕೋ ಅಥವಾ ಮಾನ್ಯ ಸಕ್ಕರೆ ಮಂತ್ರಿಗಳನ್ನು ನಂಬಬೇಕೋ ಎಂಬ ಬಗ್ಗೆ ನಮಗೆ ಅರ್ಥವಾಗುತ್ತಾ ಇಲ್ಲ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ನಾನು ಮಾತನಾಡುವಾಗ ಏನು ಹೇಳಿದೆ, ಕಾವೇರಿ ನೀರನ್ನು ನೀವು ಬಿಟ್ಟದ್ದರಿಂದಾಗಿ ಅಲ್ಲಿ ಸಕ್ಕರೆ ಕಾರ್ಖಾನೆಗಳವರಲ್ಲಿರೂ ಸಕ್ಕರೆ ಕಾರ್ಖಾನೆಯನ್ನು ಮುಚ್ಚಬಿಟ್ಟಿದ್ದಾರೆ ಎಂದು ಹೇಳಿದೆ. ಈಗ ಮಾನ್ಯ ಆತ್ಮಾನಂದರವರು ಹೇಳುತ್ತಿರುವ ಸಕ್ಕರೆ ಕಾರ್ಖಾನೆ ಅವರ ಕ್ಷೇತ್ರದಲ್ಲಿಯೇ ಬರುವುದು ಮತ್ತು ಅವರು ಆಡಳಿತ ಪಕ್ಷದವರೂ ಆಗಿದ್ದಾರೆ. ಅವರು ಏನು ಹೇಳುತ್ತಿದ್ದಾರೆಂದರೆ, ಇರತಕ್ಕಂಥ ಕೂಳಿ ಕಬ್ಬು ಒಣಗುತ್ತಿದೆ, ತೆಗೆದುಕೊಳ್ಳುವವರಿಲ್ಲ, ಬೇರೆ ಕಡೆಗೆ ಕಳುಹಿಸುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ನೀವು ನೀರು ಬಿಡಲಿಲ್ಲ ಎಂದು ಹೇಳಿದ್ದೀರಿ. ನೀರನಲ್ಲದೆ ಇನ್ನೇನು ಬಿಟ್ಟಿದ್ದು ನೀವು? ಈಗಲಾದರೂ ಕಡೇಪಕ್ಷ ನಾನು ಕೇಳುವುದೇನೆಂದರೆ, ಮಾನ್ಯ ಸಕ್ಕರೆ ಮಂತ್ರಿಗಳೇನೋ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ, What you should do is, the Government should honestly come out with the truth. ಹೌದಪ್ಪಾ, ನಮ್ಮದು ತಪ್ಪಾಗಿದೆ ಅಥವಾ in various circumstances, we have kept the water. ಈಗೇನಾಗಿದೆ ನೋಡಿ, ನೀವು, ಪಾಪ ನಿಮ್ಮ ಕಾರ್ಯದರ್ಶಿಗಳು, ಡೈರಕ್ಟರ್‌ರವರು, ಎಲ್ಲಾ ನಮ್ಮ ಕಾನ್‌ಸ್ಟಿಟ್ಯೂಯೆನ್ಸಿಯಿಂದ ನೀವು ಡೈರಕ್ಷನ್ ಕೊಟ್ಟ ಮೇಲೆ ಕಬ್ಬನ್ನು ಸಾಗಿಸಲಿಕ್ಕೆ ಬಹಳ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದರು. ಆದರೆ ಮಂಡ್ಯದಲ್ಲಿಯೇ ರೈತರು ಗಲಾಟೆ ಮಾಡುತ್ತಿದ್ದಾರೆ. ಹೀಗಿರುವಾಗ ನಮ್ಮ ಕನಕಪುರದ ಕಬ್ಬನ್ನು ಹೇಗೆ ತೆಗೆದುಕೊಂಡು ಹೋಗುತ್ತಾರೆ? ಅದಕ್ಕೇ ಈಗ ಕಬ್ಬನ್ನು ಆಂಧ್ರದ ಪುಂಗನೂರು ಎನ್ನುವ ಕಡೆಗೆ ತಾವೇನು ವ್ಯವಸ್ಥೆ ಮಾಡಿದ್ದೀರೋ ಅಲ್ಲಿಗೆ ಕಬ್ಬನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ, ಅದಕ್ಕೂ ಕೂಡ ಅದೇ ರೀತಿಯಾದ ವ್ಯವಸ್ಥೆಯನ್ನು ಮಾಡಿ at least you must admit ನೀರಿಲ್ಲ ಅದಕ್ಕೋಸ್ಕರ ಕಾರ್ಖಾನೆಗಳನ್ನು ಮುಚ್ಚಿದ್ದೇವೆ ಎನ್ನಿ. You should be frank enough.

ಶ್ರೀ ಎಂ. ಮಹದೇವು:- ಈಗ ಅಲ್ಲಿ ಮಳೆ ಬಂದಿರುವುದರಿಂದ ನೀರಿನ ಸಮಸ್ಯೆ ಸ್ವಲ್ಪ ಕಡಿಮೆ ಆಗಿದೆ. 60 ಸಾವಿರ ಟನ್ ಕಬ್ಬಿದೆ. ಇನ್ನೊಂದು ವಾರದಲ್ಲಿ 40 ಸಾವಿರ ಟನ್ ಕಬ್ಬು ಅರೆಯುವುದಕ್ಕೆ ಅವಕಾಶವಾಗುತ್ತದೆ. ಇನ್ನುಳಿದಿರತಕ್ಕಂತ 20 ಸಾವಿರ ಟನ್ ಕಬ್ಬನ್ನು ಅಕ್ಕಪಕ್ಕದ ಸಕ್ಕರೆ ಕಾರ್ಖಾನೆಗಳಿಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸಿಂಧ್ಯಾರವರು ಕೂಡ ಹೇಳಿದರು, ಅವರು ಬಹುಶಃ ಈ ಭಾಗದ ರೈತರ ಹಿತದೃಷ್ಟಿಯಿಂದಲೇ ಅವರು ಮೊದಲು

ಬಂದು ಹೇಳಿದರು. ಅವರು ಹೇಳಿದ ಪ್ರಕಾರ ನಾವು ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ಮಾಡಿದ್ದೇವೆ. ಮಾಡಿಲ್ಲ ಎಂದು ಹೇಳುವುದಿಲ್ಲ. ಮಾಡಿದ್ದೇವೆ.

ಶ್ರೀ ಪಿ. ಚೆನ್ನಿಗಪ್ಪ:- ಅಧ್ಯಕ್ಷರೇ,

ಉಪಾಧ್ಯಕ್ಷರು:- ಅದು ಈ ಪ್ರಶ್ನೆಗೆ ಸಂಬಂಧಿಸಿದ್ದಲ್ಲ. ನೀವು ಇದಕ್ಕೆ ಸಂಬಂಧಪಟ್ಟ ಪ್ರಶ್ನೆ ಕೇಳಬೇಕೆ ಹೊರತು, ಇದಕ್ಕೆ ಸಂಬಂಧ ಇಲ್ಲದ ಪ್ರಶ್ನೆ ಕೇಳಬೇಡಿ.

ಶ್ರೀ ಪಿ. ಚೆನ್ನಿಗಪ್ಪ:- ಮಾನ್ಯ ಉಪಾಧ್ಯಕ್ಷರೆ, ರೈತರಿಗೆ ಬಹಳ ತೊಂದರೆಯಾಗಿದೆ. ಇವತ್ತು ಗೌರಿಬಿದನೂರು ಸಕ್ಕರೆ ಫ್ಯಾಕ್ಟರಿಯಲ್ಲಿ 2 ಕೋಟಿ 30 ಲಕ್ಷ ರೂಪಾಯಿ ರೈತರ ಬೆಲೆ ಕೊಟ್ಟಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ಅದರ ಬಗ್ಗೆ ಮಾತನಾಡಬೇಕು ಎಂದರೆ ಜೀರೋ ಅವರ್‌ನಲ್ಲಿ ಎತ್ತಿ. ನಿಮಗೆ ಅವಕಾಶ ಕೊಡುತ್ತೇನೆ. ಇದು ಈ ಪ್ರಶ್ನೆಗೆ ಸಂಬಂಧಪಟ್ಟಿದ್ದಲ್ಲ. ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಮತ್ತು ಎರಡನೆಯದು ಈ ಪ್ರಶ್ನೆ ಇಲ್ಲಿ ಇಲ್ಲ. ಆದುದರಿಂದ ಜೀರೋ ಅವರ್‌ನಲ್ಲಿ ಬೇಕಾದರೆ ಅಲೋ ಮಾಡುತ್ತೇನೆ, ಮಾತನಾಡಿ.

ಶ್ರೀ ಪಿ. ಚೆನ್ನಿಗಪ್ಪ:- ಮಾನ್ಯ ಉಪಾಧ್ಯಕ್ಷರೆ ಸಪ್ಲಿಮೆಂಟರಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಿ. ನಾನು ನಿಮಗೆ ಜೀರೋ ಅವರ್‌ನಲ್ಲಿ ಅವಕಾಶ ಕೊಡುತ್ತೇನೆ. ಆದರೆ ಇದು ಈ ಪ್ರಶ್ನೆಗೆ ಸಂಬಂಧಿಸಿದ್ದಲ್ಲ. ಆದುದರಿಂದ ನಾನು ಅವಕಾಶವನ್ನು ಕಲ್ಪಿಸುವುದಿಲ್ಲ, ಕುಳಿತುಕೊಳ್ಳಿ, ನಾನು ಅವಕಾಶವನ್ನು ಕೊಡುವುದಿಲ್ಲ.

(ಗೊಂದಲ)

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಉಪಾಧ್ಯಕ್ಷರೆ, ನಾನು ಎಥೆನಾಲ್ ಉತ್ಪಾದನೆ ಬಗ್ಗೆ ಕೇಳುತ್ತೇನೆ.

ಉಪಾಧ್ಯಕ್ಷರು:- ಅವರು ಕೇಳುತ್ತಿರುವುದು ಅವರ ಫ್ಯಾಕ್ಟರಿಗೆ ಸಂಬಂಧಿಸಿದ್ದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಉಪಾಧ್ಯಕ್ಷರೆ, ಅಮೆರಿಕಾ ಮತ್ತು ಇರಾಕ್ ಯುದ್ಧ ಸಂಭವಿಸುವುದರಿಂದ ತೈಲದ ಅಭಾವ ನಮಗೂ ಕೂಡ ಆಗುತ್ತದೆ. ಇವತ್ತು ಎಥೆನಾಲ್ ಅನ್ನು ಪೆಟ್ರೋಲ್‌ನಲ್ಲಿ ಮಿಶ್ರ ಮಾಡಿ ಬಳಕೆ ಮಾಡತಕ್ಕಂಥಾದ್ದು ತುಂಬಾ ಅವಶ್ಯ ಇದೆ. ಈಗ ನಾವು, ಒಂದು ಕಡೆ ಜೋಳದ ಬೆಳೆಯಿಂದ ಕೂಡ ಎಥೆನಾಲ್ ಉತ್ಪಾದನೆಯಾಗುತ್ತದೆಂದು ಪತ್ರಿಕೆಯಲ್ಲಿ ನೋಡಿದ್ದೇವೆ. ಅದು ಸಾಧ್ಯವೇ ಎಂದು ಮಾನ್ಯ ಪಶುಸಂಗೋಪನಾ ಸಚಿವರು ಹೇಳಬೇಕಾಗುತ್ತದೆ. ಅದು ಸಾಧ್ಯವಿದ್ದರೆ ಅದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಮಾನ್ಯ ಉಪಾಧ್ಯಕ್ಷರ ಮುಖಾಂತರ ಕೇಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಾನ್ಯ ಉಪಾಧ್ಯಕ್ಷರೆ, ಸಕ್ಕರೆ ಉತ್ಪಾದನೆ ಲಾಭದಾಯಕವಲ್ಲ. ಕನ್‌ವರ್ಷನ್ ಚಾರ್ಜಸ್ ನೋಡಿದರೆ ಸಕ್ಕರೆ ಕಾರ್ಖಾನೆ ಎನ್ನುವ ಹೆಸರು ಬಿಟ್ಟರೆ ಇವತ್ತು ಸಕ್ಕರೆ ಬೈ ಪ್ರಾಡಕ್ಟ್ ಆಗುತ್ತದೆ. ಮಾನ್ಯ ದೇಶಪಾಂಡೆಯವರು ಇಲ್ಲಿ ಇದ್ದಾರೆ. ನೇರವಾಗಿ ಎಥೆನಾಲ್ ಉತ್ಪಾದನೆಯನ್ನು ಸಕ್ಕರೆ ಕಾರ್ಖಾನೆಯಲ್ಲಿ ಮಾಡುವುದಕ್ಕೆ ಅಥವಾ ಎಥೆನಾಲ್ ಪ್ಲಾಂಟ್ ಮಹಾರಾಷ್ಟ್ರದಲ್ಲಿ ಕೆಲವು ಕಡೆ ಕೊಟ್ಟಿದ್ದಾರೆ, ಆ ರೀತಿ ಏನಾದರೂ ಮಾಡುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಮೇಶ್ ಕತ್ತಿಯವರು ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ಬದಲಿಗೆ ಎಥೆನಾಲ್ ಉತ್ಪಾದನೆ ಮಾಡುವುದಕ್ಕೆ ಪ್ಲಾನ್ ಮಾಡುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಹಾರಾಷ್ಟ್ರದಲ್ಲಿ ಎಥೆನಾಲ್ ಪ್ಲಾಂಟ್‌ಗೆ ಪರ್ಮಿಷನ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಅದು ಕೇಂದ್ರ ಸರ್ಕಾರ ಕೊಡಬೇಕು.

(ಗೊಂದಲ)

ಶ್ರೀ ಎಂ. ಮಹದೇವ:- ಮಾನ್ಯ ಉಪಾಧ್ಯಕ್ಷರೆ, ಐದು ಪರ್ಸೆಂಟ್ ಎಥೆನಾಲ್ ಅನ್ನು ಪೆಟ್ರೋಲ್‌ಗೆ ಮಿಕ್ಸ್ ಮಾಡುವುದಕ್ಕೆ ಅವಕಾಶವನ್ನು ಸೆಂಟ್ರಲ್ ಗೌವರ್ನ್‌ಮೆಂಟ್ ಮಾಡಿಕೊಟ್ಟಿದೆ. ಆ ವಿಚಾರದಲ್ಲಿ ಯಾವ್ಯಾವ ರಾಜ್ಯದಲ್ಲಿ ಮೊಲಾಸಿಸ್ ಎಷ್ಟೆಷ್ಟು ಉತ್ಪತ್ತಿ ಆಗುತ್ತದೆ ಮತ್ತು ಸಿಗುತ್ತದೆ, ಹಾಗೂ ಅದನ್ನು ಕಾಂಪನ್ಸೇಟ್ ಮಾಡುವುದಕ್ಕೆ ಯೂನಿಯನ್ ಗೌವರ್ನಮೆಂಟ್ ಜೊತೆ ರಾಜ್ಯ ಸರ್ಕಾರದವರು ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಜೊತೆ ಮಾತನಾಡಿ, ನಮ್ಮಿಂದ ಎಷ್ಟು ಎಥೆನಾಲ್ ಇಂಪ್ರೂವ್ ಮಾಡುವುದಕ್ಕೆ ಆಗುತ್ತದೆ ಅಷ್ಟನ್ನು ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ಪ್ರಶ್ನೆಗೆ ಉತ್ತರ ಬರಲಿಲ್ಲವೆಂದರೆ ನಾವು ಕೇಳುವಂತಹ ಅವಶ್ಯಕತೆ ಏನಿದೆ? ಮಂತ್ರಿಗಳು ಅದಕ್ಕೆ ಉತ್ತರಿಸುವುದಿಲ್ಲವೆಂದರೆ, ಹೇಗೆ?

ಧಾರವಾಡ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನ

193 (2038) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲ್ಗುಟಗಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಗಂಗಾಕಲ್ಯಾಣ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಎಷ್ಟು; (ಜಿಲ್ಲಾವಾರು ವಿವರ ನೀಡಿ)

ಆ) ಈ ಪೈಕಿ ಧಾರವಾಡ ಜಿಲ್ಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿದ ವಿವರ ಒದಗಿಸಿರಿ; (ತಾಲ್ಲೂಕುವಾರು ಮಾಹಿತಿ)

ಇ) ಇದರಲ್ಲಿ ಈಗಾಗಲೇ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ; ಇನ್ನೂ ಎಷ್ಟು ಬಾಕಿ ಇವೆ; ಕೊರೆಸದೇ ಬಾಕಿ ಇರಲು ಕಾರಣಗಳೇನು; ಯಾವಾಗ ಮುಗಿಸಲಾಗುತ್ತದೆ;